CC No.677/2023
CW-7  PW-5

**<u>ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು  ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ</u>**

**ಸಿ ಸಿ ನಂ.  677/2023**

| | | |
|---|---|---|
| **ಹೆಸರು** | :- | **ಸಂಜಿತ** |
| **ತಂದೆಯ ಹೆಸರು** | :- | **ಬಲೀಂದ್ರಪ್ಪ** |
| **ವಯಸ್ಸು** | :- | **15 ವರ್ಷ** |
| **ಉದ್ಯೋಗ** | :- | **ವಿದ್ಯಾರ್ಥಿನಿ** |
| **ಸ್ಥಳ** | :- | **ಓಟೂರು** |

**<u>ದಿನಾಂಕಃ 13.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ಈ ಹಂತದಲ್ಲಿ ಬಾಲಕಿಗೆ ನಾನು ನ್ಯಾಯಾಲಯದಲ್ಲಿರುವ ನ್ಯಾಯಾಧೀಶರು ಎಂಬ ಮನವರಿಕೆ ಮಾಡಿರುತ್ತೇನೆ. ಯಾವುದಾದರೂ ಘಟನೆ ನಡೆದಿದ್ದರೆ ನಿರ್ಭೀತಿಯಿಂದ ನಡೆದ ಘಟನೆಯನ್ನು ಯಥಾ ರೂಪದಲ್ಲಿ ಹೇಳಬೇಕು ಎಂಬ ಮನವರಿಕೆ ಮಾಡಿರುತ್ತೇನೆ.

ಬಾಲಕಿಗೆ ಈ ಕೆಳಗಿನಂತೆ ಪ್ರಶ್ನೆಗಳನ್ನು ಕೇಳಲಾಗಿರುತ್ತದೆ.
ಪ್ರಶ್ನೆ 1.  ನಿನ್ನ ಹೆಸರು ಏನು?
ಉತ್ತರಃ ಕುಮಾರಿ ಸಂಜಿತ
ಪ್ರಶ್ನೆ 2.  ನಿನ್ನ ತಂದೆಯ ಹೆಸರು ಏನು?
ಉತ್ತರಃ ಬಲೀಂದ್ರಪ್ಪ
ಪ್ರಶ್ನೆ 3.  ನೀನು ಎಷ್ಟನೇ ತರಗತಿ ಓದುತ್ತಿದ್ದಿಯಾ?
ಉತ್ತರಃ ಎಸ್.ಎಸ್.ಎಲ್.ಸಿ ಓದುತ್ತಿರುತ್ತೇನೆ.
ಪ್ರಶ್ನೆ 4.  ನೀನು ಎಲ್ಲಿಗೆ ಬಂದಿದ್ದೀಯಾ ?
ಉತ್ತರಃ ನ್ಯಾಯಾಲಯಕ್ಕೆ ಬಂದಿದ್ದೇನೆ.

ಪ್ರಶ್ನೆ 5. ನೀನು ಈಗ ನ್ಯಾಯಾಲಯಕ್ಕೆ ಯಾವ ಉದ್ದೇಶಕ್ಕೆ ಬಂದಿದ್ದಿಯಾ ?
ಉತ್ತರಃ  ಸಾಕ್ಷಿ ಹೇಳಲು ಬಂದಿರುತ್ತೇನೆ.
ಪ್ರಶ್ನೆ 6. ನಿನ್ನನ್ನು ಯಾರಾದರೂ ಹೇಳಿಕೆ ನೀಡು ಎಂದು ಪ್ರೇರೇಪಿಸಿದ್ದಾರಾ ?
ಉತ್ತರಃ ಇಲ್ಲ.

ಮೇಲೆ ಹೇಳಿದ ಸಾಮಾನ್ಯ ಪ್ರಶ್ನೆಗಳನ್ನು ಬಾಲಕಿಗೆ ಕೇಳಲಾಗಿ ಬಾಲಕಿಯು ಸಮರ್ಪಕವಾದ ಉತ್ತರ ನೀಡಿದ್ದು, ಆಕೆಯು ಸಾಕ್ಷಿ ಹೇಳಲು ಸಶಕ್ತಳಾಗಿರುತ್ತಾಳೆಂದು ಬಾಲಕಿಯ ಸಾಕ್ಷಿಯನ್ನು ತೆಗೆದುಕೊಳ್ಳಲಾಯಿತು.

ಚಾಸಾ–1 ನನ್ನ ದೊಡ್ಡಪ್ಪನ ಮಗ. ಚಾಸಾ–4 ನನ್ನ ದೊಡ್ಡಮ್ಮ. ಚಾಸಾ–5 ಮತ್ತು 6 ರವರು ನನ್ನ ದೊಡ್ಡಪ್ಪನ ಮಕ್ಕಳು. ಚಾಸಾ–8 ನಮ್ಮ ಪಕ್ಕದ ಮನೆಯವರು. ಸಾಕ್ಷಿಯು 1, 3, 4, 6, 9, 12, 18 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ದಿಃ21.06.2022 ರಂದು ರಾತ್ರಿ 8.30 ರ ಸಮಯದಲ್ಲಿ ನಾನು ಮತ್ತು ಚಾಸಾ–1, 6 ಮತ್ತು 5 ರವರು ಮನೆಯಲ್ಲಿ ಓದುತ್ತಿರುವಾಗ ಆರೋಪಿತರು ಹಲ್ಲೆ ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಆರೋಪಿತರು ಚಾಸಾ–1, 5, 6 ರವರ ಮೇಲೆ ಹಲ್ಲೆ ಮಾಡಿರುತ್ತಾರೆ. ನಂತರ ಆರೋಪಿತರು ನನ್ನನ್ನು ಎಳೆದುಕೊಂಡು ರಸ್ತೆಗೆ ಕರೆದುಕೊಂಡು ಹೋಗುತ್ತಿರುವಾಗ ಗ್ರಾಮಸ್ಥರು ಬಂದು ಗಲಾಟೆಯನ್ನು ಬಿಡಿಸಿರುತ್ತಾರೆ. ನಂತರ ನನಗೆ ಗ್ರಾಮಸ್ಥರು ಮನೆಗೆ ಕರೆದುಕೊಂಡು ಹೋಗಿ ಬಿಟ್ಟಿರುತ್ತಾರೆ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ. ಪಿ.ಎಸ್.ಕೆ. ವಕೀಲರಿಂದಃ**

ನನ್ನ ತಂದೆಯ ಮೇಲಿಯೂ ಸಹ ಪ್ರಕರಣ ದಾಖಲಿದೆ ಅಂದರೆ ಸರಿ. ನಮ್ಮ ಕುಟುಂಬಕ್ಕೂ ಮತ್ತು ಆರೋಪಿತರ ಕುಟುಂಬಕ್ಕೂ ಜಮೀನಿನ ವಿಷಯಕ್ಕೆ ಸಂಬಂಧಿಸಿದಂತೆ ಜಗಳ ಇದೆ ಅಂದರೆ ಸರಿ. ಅದಕ್ಕೆ ಸಂಬಂಧಪಟ್ಟಂತೆ ಪ್ರಕರಣಗಳು ಇವೆ ಅಂದರೆ ಸರಿ. ನಾನು ಹೇಳಿದಂತೆ ಆರೋಪಿತರು ನನಗಾಗಲಿ, ಚಾಸಾ–1, 5 ಮತ್ತು 6 ರವರ ಮೇಲೆ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಆರೋಪಿತರು ನನ್ನನ್ನು ಎಳೆದುಕೊಂಡು ಹೋಗಿರುವುದಿಲ್ಲ ಅಂದರೆ ಸರಿಯಲ್ಲ. ಚಾಸಾ–1 ನನ್ನ ಸಹೋದರ ಆಗಿರುವುದರಿಂದ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**